# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583105

ಕುಲಸಚಿವರು (ಮೌಲ್ಯಮಾಪನ) ದೂ.ಸಂ.: 08392-242504/241011


ಕ್ರ.ಸಂ: ವಿಶ್ರೀಕೃವಿಬ/ಪರೀಕ್ಷಾ/ಪ.ಕೇ.ಪ/2017-18/ 2754 ದಿನಾಂಕ: 16.12.2017

## ಡಿಸೆಂಬರ್-2017ರ ತಿಂಗಳಿನಲ್ಲಿ ನಡೆಯುವ ವಿಶೇಷ ಸ್ನಾತಕ ಪದವಿ ಪರೀಕ್ಷಾ ಕೇಂದ್ರಗಳ ಪಟ್ಟಿ (3ನೇ ಮತ್ತು 5ನೇ ಸೆಮಿಸ್ಟರ್)

| ಕ್ರ.ಸಂ. | ಸ್ಥಳ | ಪರೀಕ್ಷಾ ಕೇಂದ್ರದ ಹೆಸರು |
|---|---|---|
| 1. | ಬಳ್ಳಾರಿ | 1026 – ಶ್ರೀ ಮೇಧಾ ಪದವಿ ಮಹಾವಿದ್ಯಾಲಯ, ಕೋಟೆ ಮುಖ್ಯ ರಸ್ತೆ, ಬಳ್ಳಾರಿ. |
| 2. | ಹೊಸಪೇಟೆ | 1101 – ಶ್ರೀ ಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ. |
| 3. | ಕೊಪ್ಪಳ | 2001 – ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ. |

16/12/17

ಕುಲಸಚಿವರು (ಮೌಲ್ಯಮಾಪನ)

REGISTRAR (EVAL)
Vijayanagara Sri Krishnadevaraya University
Jnana Sagar Campus, Vinayakanagar,
Cantonment, BALLARI-583 104.

**ವಿಶೇಷ ಸೂಚನೆ:**

866 ಅನ್ಯರಾಜ್ಯ ಮತ್ತು ಅನ್ಯಮಂಡಳಿಯ ಸ್ನಾತಕ ಪದವಿ 3ನೇ ಮತ್ತು 5ನೇ ಸೆಮಿಸ್ಟರ್‌ನ (ರೆಗ್ಯೂಲರ್) ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಗಳನ್ನು ಡಿಸೆಂಬರ್-2017ರ ತಿಂಗಳಿನಲ್ಲಿ ನಡೆಸಲು ಪರೀಕ್ಷಾ ಅಧಿಸೂಚನೆಯನ್ನು ಹೊರಡಿಸಿ ಸೂಚಿಸಿದಂತೆ, 3 ಪರೀಕ್ಷಾ ಕೇಂದ್ರಗಳನ್ನು ತೆರೆದು, ಅರ್ಜಿಯಲ್ಲಿ ಪರೀಕ್ಷಾ ಕೇಂದ್ರವನ್ನು ನಮೂದಿಸಿ ಖುದ್ದಾಗಿ ಪರೀಕ್ಷಾ ವಿಭಾಗ, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿಗೆ ದಿನಾಂಕ: 12.12.2017 ರೊಳಗಾಗಿ ತಲುಪಿಸಲು ತಿಳಿಸಿದ್ದು, ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಅಧಿಸೂಚನೆಯಲ್ಲಿ ಸೂಚಿಸಲಾಗಿದೆ. ಆದರೂ, ಹೆಚ್ಚಿನ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದ ಆಯ್ಕೆಯನ್ನು ತಿಳಿಸದೇ ಇರುತ್ತಾರೆ.

ಆದ ಕಾರಣ, ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿ ಸೂಚಿಸಿದ ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಿದ ಪರೀಕ್ಷಾ ಕೇಂದ್ರದಲ್ಲಿ ಹಾಗೂ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡದೆ ಇರುವ ವಿದ್ಯಾರ್ಥಿಗಳಿಗೆ ವ್ಯಾಸಾಂಗ ಮಾಡುತ್ತಿರುವ ಕಾಲೇಜಿನ ಹತ್ತಿರದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸಲಾಗಿದೆ.

ಮುಂದುವರೆದು, ವಿದ್ಯಾರ್ಥಿಗಳ ಪ್ರವೇಶ ಪತ್ರ (HALL TICKET) ದಲ್ಲಿ ಪರೀಕ್ಷಾ ಕೇಂದ್ರಗಳನ್ನು ನಮೂದಿಸಲಾಗುವುದು. ಈ ವಿಷಯವಾಗಿ ಪರೀಕ್ಷಾ ವಿಭಾಗದ ತೀರ್ಮಾನವೇ ಅಂತಿಮವಾಗಿದ್ದು, ವಿದ್ಯಾರ್ಥಿಗಳು ಹಂಚಿಕೆ ಮಾಡಿದ ಪರೀಕ್ಷಾ ಕೇಂದ್ರಗಳಲ್ಲಿಯೇ ಪರೀಕ್ಷೆ ಬರೆಯಬೇಕು. ಅನಗತ್ಯವಾಗಿ ಪರೀಕ್ಷಾ ವಿಭಾಗದೊಂದಿಗೆ ಈ ವಿಷಯವಾಗಿ ವ್ಯವಹರಿಸುವಂತಿಲ್ಲ. ಹಾಗೂ ಈಗಾಗಲೇ ಹೊರಡಿಸಿದ ಪರೀಕ್ಷಾ ವೇಳಾಪಟ್ಟಿಯಲ್ಲಿ ಯಾವುದೇ. ಬದಲಾವಣೆಗಳು ಇರುವುದಿಲ್ಲ.